ಕರ್ನಾಟಕ ವಿಧಾನ ಪರಿಷತ್ತು

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1101 (1268)
2.	ಸದಸ್ಯರ ಹೆಸರು	:	ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
3.	ಉತ್ತರಿಸಬೇಕಾದ ದಿನಾಂಕ	:	17-03-2020
4.	ಉತ್ತರಿಸುವ ಸಚಿವರು	:	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಚಾಮರಾಜ ನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿಗಳು ಪೂರ್ಣಗೊಂಡಿವೆಯೇ; ಕಾಮಗಾರಿಗಳು ಪೂರ್ಣಗೊಳ್ಳದೇ ಇದ್ದಲ್ಲಿ, ಯಾವ ಯಾವ ಕಾಮಗಾರಿಗಳು ಬಾಕಿ ಇವೆ; ಇದಕ್ಕೆ ತಗುಲಿದ ಒಟ್ಟು ಅಂದಾಜು ವೆಚ್ಚ ಎಷ್ಟು;	ಏಷ್ಯಿಯನ್ ಅಭಿವೃದ್ಧಿ ಬ್ಯಾಂಕ್ ನೆರವಿನ ಉತ್ತರ ಕರ್ನಾಟಕ ನಗರ ವಲಯ ಬಂಡವಾಳ ಹೂಡಿಕಾ ಕಾರ್ಯಕ್ರಮದಡಿಯಲ್ಲಿ (ಎನ್.ಕೆ.ಯು.ಎಸ್.ಐ.ಪಿ) ಚಾಮರಾಜನಗರದಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ದಿನಾಂಕ 31/12/2018 ರಂದು ಪೂರ್ಣಗೊಂಡಿದೆ. ಮುಂದಿನ ನಿರ್ವಹಣೆಗೆ ನಗರಸಭೆ, ಚಾಮರಾಜನಗರ ರವರಿಗೆ ಹಸ್ತಾಂತರಿಸಿದೆ. ಸದರಿ ಕಾಮಗಾರಿಗೆ ಇದುವರೆಗೂ ರೂ.29.19 ಕೋಟಿ ವೆಚ್ಚ ಮಾಡಲಾಗಿದೆ.
ಆ)	ಒಳಚರಂಡಿ ಕಾಮಗಾರಿ ಮುಗಿದ್ದರೂ, ಮನೆ ಮನೆಗೆ ಸಂಪರ್ಕ ಕಲ್ಪಿಸದಿರಲು ಕಾರಣಗಳೇನು; ಒಳಚರಂಡಿ ಕಾಮಗಾರಿಯಲ್ಲಿ ಲೋಪದೋಷಗಳೇನಾದರೂ ಇದೆಯೇ;	ಚಾಮರಾಜನಗರ ಪಟ್ಟಣದಲ್ಲಿ 16191 ಮನೆಗಳಿದ್ದು, ಸುಮಾರು 6300 ಮನೆ ಸಂಪರ್ಕವನ್ನು ಕಲ್ಪಿಸಲಾಗಿರುತ್ತದೆ. ಉಳಿದ ಮನೆ ಸಂಪರ್ಕಗಳು ಪ್ರಗತಿಯಲ್ಲಿರುತ್ತದೆ. ಮನೆ ಸಂಪರ್ಕ ಕಲ್ಪಿಸಲು ವಿಳಂಬಕ್ಕೆ ಕಾರಣಗಳು ಈ ಕೆಳಕಂಡಂತಿರುತ್ತದೆ: 1) ಮನೆಗೆ ಸಂಪರ್ಕವನ್ನು ಪಡೆಯಲು, ಸಂಬಂಧಪಟ್ಟ ಮನೆ ಮಾಲೀಕರು ಒಂದು ಸಂಪರ್ಕಕ್ಕೆ ತಗಲುವ ವೆಚ್ಚ ಸುಮಾರು ರೂ.5,000/- ರಿಂದ ರೂ.15000/- ವರೆಗೆ ಭರಿಸಬೇಕಾಗಿರುತ್ತದೆ. 2) ಚಾಮರಾಜನಗರದ ಒಟ್ಟು ಮನೆಗಳ ಸಂಖ್ಯೆ.16191 ಗಳಿದ್ದು ಒಂದು ರಿಸಿವಿಂಗ್ ಚೇಂಬರ್‌ಗೆ 3 ಮನೆ ಸಂಪರ್ಕ ಕಲ್ಪಿಸಬಹುದಾಗಿರುತ್ತದೆ. ಅದರಂತೆ ಒಟ್ಟು 5397 ರಿಸಿವಿಂಗ್ ಚೇಂಬರ್‌ಗಳು ಅವಶ್ಯಕತೆ ಇರುತ್ತದೆ. ಮೊದಲನೆ ಹಂತದ ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ 2415 ರಿಸಿವಿಂಗ್ ಚೇಂಬರ್‌ಗಳನ್ನು ಮಾತ್ರ ಅಳವಡಿಸಲು ಅವಕಾಶವಿದ್ದು, ಇವುಗಳನ್ನು ನಿರ್ಮಿಸಲಾಗಿದೆ ಹಾಗೂ ಸುಮಾರು 800 ರಿಸಿವಿಂಗ್ ಚೇಂಬರ್‌ಗಳನ್ನು ನಗರೋತ್ಥಾನ ರಸ್ತೆ ಕಾಮಗಾರಿಗಳ ಪ್ರಗತಿಯ ಸಂದರ್ಭದಲ್ಲಿ ನಿರ್ಮಿಸಲಾಗಿರುತ್ತದೆ. ಉಳಿದ 2182 ರಿಸಿವಿಂಗ್ ಚೇಂಬರ್‌ಗಳು ಅಗತ್ಯವಿರುತ್ತದೆ. ಆದರೆ ಅನುದಾನ ಲಭ್ಯವಿರದ ಕಾರಣ ಮನೆ ಮನೆಗೆ ಸಂಪರ್ಕ ಕಲ್ಪಿಸಲು ವಿಳಂಬವಾಗಿರುತ್ತದೆ.

ಇ)	ಪ್ರಸ್ತುತ ತೆರೆದ ಚರಂಡಿಗಳಲ್ಲೇ ಕೊಳಚೆ ನೀರು ಹರಿಯುತ್ತಿದ್ದು, ಬೇಸಿಗೆಯಲ್ಲಿ ಖಾಯಿಲೆಗಳು ಹರಡುವ ಸಂಭವ ಇರುವುದರಿಂದ ಕೂಡಲೇ ಮನೆ ಮನೆಗಳಿಗೆ ಒಳಚರಂಡಿ ಸಂಪರ್ಕ ಕಲ್ಪಸಲು ಸೂಕ್ತ ಕ್ರಮ ಜರುಗಿಸಲಾಗುವುದೇ ?	ಮನೆಗಳಿಗೆ ಸಂಪರ್ಕವನ್ನು ಸಂಬಂಧಪಟ್ಟ ಮನೆ ಮಾಲೀಕರು ಕಲ್ಪಿಸಿಕೊಳ್ಳಬೇಕಾಗಿರುತ್ತದೆ. ಈ ಕಾರ್ಯಕ್ಕೆ ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಯವರಿಂದ ಅರಿವು ಮೂಡಿಸಿ ಸುಮಾರು 6300 ಮನೆ ಸಂಪರ್ಕಗಳನ್ನು ಕಲ್ಪಿಸಲಾಗಿರುತ್ತದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮನೆಗಳಿಗೆ ಉಚಿತವಾಗಿ ನಗರಸಭೆಯ ಅನುದಾನದಲ್ಲಿ, ಒಳಚರಂಡಿ ಸಂಪರ್ಕ ಕಲ್ಪಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ

ಕಡತ ಸಂಖ್ಯೆ: ನಅಇ 88 ಪಿ.ಆರ್.ಜೆ 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.